**ಸಾಕ್ಷಿಯನ್ನು ದಿಃ 12.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತ ಗೊರಹಳ್ಳಿ ಬಳಿ ಅಂದಾಜು 07.30 ಗಂಟೆಗೆ ಆಗಿದೆ. ನಾನು ಕೊಣನೂರು ಕಡೆಯಿಂದ ಬರುತ್ತಿದ್ದು ಅಪಘಾತ ಆದವರ ಹಿಂದೆ ಇದ್ದೆ. ನನ್ನಿಂದ ಅವರು 100 ಅಡಿ ದೂರದಲ್ಲಿದ್ದರು. ನಾನು ಬರುತ್ತಿದ್ದ ರಸ್ತೆ ಅಂದಾಜು 35 ಅಡಿ ಅಗಲ ಇತ್ತು. ಮುಂದೆ ಚಲಾಯಿಸಿಕೊಂಡು ಹೋಗುತ್ತಿದ್ದ ಮೋಟಾರ್ ಸೈಕಲ್ ಗೆ ಹೆಡ್ ಲೈಟ್ ಇತ್ತು. ಅಪಘಾತ ಆದವರು ನನಗೆ ಸಂಬಂಧಿಕರಲ್ಲ. ನನಗೆ ಪರಿಚಿತರಲ್ಲ. ಅವರ ಬಗ್ಗೆ ಪೋಲೀಸರಿಂದ ನನಗೆ ತಿಳಿಯಿತು. ಅಪಘಾತದ ಬಗ್ಗೆ ನಾನು ಪೋಲೀಸರಿಗೆ ಮಾಹಿತಿ ನೀಡಿಲ್ಲ. ಸ್ಥಳದಲ್ಲಿದ್ದರು ಕರೆಯಿಸಿದರು ನಾನು ಸ್ಥಳದಲ್ಲೇ ಇದ್ದೆ. ಆ ಸಂದರ್ಬದಲ್ಲಿ ಸಂಪೂರ್ಣ ಕತ್ತಲಾಗಿತ್ತು ಎಂದರೆ ಸರಿ.

2. ಅಪಘಾತ ಆದ ಸ್ಥಳ ದ್ವಿಪಥ ರಸ್ತೆ. ಟ್ರಾಕ್ಟರ್ ರಸ್ತೆಯ ಮಧ್ಯಭಾಗದಲ್ಲಿ ನಿಂತಿತ್ತು. ನಕ್ಷೆಯ ಪ್ರಕಾರ ರಸ್ತೆಯ 10 ಅಡಿ ಬಲಭಾಗಕ್ಕೆ ಟ್ರಾಕ್ಟರ್ ಇದೆ ಎಂದರೆ ಸರಿಯಲ್ಲ. ರಸ್ತೆಯ ಮಧ್ಯಭಾಗದಲ್ಲಿ ಇತ್ತು. ಬೈಕ್ ಚಾಲಕರೆ ಅತಿವೇಗವಾಗಿ ಚಲಾಯಿಸಿಕೊಂಡು ಬಂದು ಟ್ರಾಕ್ಟರ್ ಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಒಳಪಟ್ಟ ಬೈಕ್ ಸಂಪೂರ್ಣ ಜಖಂ ಆಗಿತ್ತು ಎಂದರೆ ಸರಿ. ಆದ ಕಾರಣ ಸದರಿ ಬೈಕ್ ಸವಾರರು ಬೈಕ್ ಅನ್ನು ಅತಿವೇಗವಾಗಿ ಚಲಾಯಿಸಿದ್ದರು ಎಂದರೆ ಸರಿಯಲ್ಲ. ನಿದಾನವಾಗಿ ಬರುತ್ತಿದ್ದರೆ 50 ಮೀಟರ್ ದೂರದಲ್ಲಿ ಏನಿದ್ದರೂ ಕಾಣುತ್ತಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಬೈಕ್ ಸವಾರರ ಬೈಕ್ ನ ಲೈಟ್ ಮಬ್ಬಾಗಿತ್ತು ಎನ್ನುತ್ತಾರೆ. ಸಣ್ಣೇಗೌಡರವರು ಹೆಲ್ಮೆಟ್ ಧರಿಸಿದ್ದರು. ಪೋಲೀಸ್ ದಾಖಲೆಗಳಲ್ಲಿ ಈ ಬಗ್ಗೆ ಹೇಳಿಲ್ಲ ಎಂದರೆ ಹೆಲ್ಮೆಟ್ ಇತ್ತು ಎನ್ನುತ್ತಾರೆ. ಟ್ರಾಕ್ಟರ್ ಮತ್ತು ಬೈಕ್ ಅನ್ನು ಪೋಲೀಸರು ವಶಪಡಿಸಿಕೊಂಡಿದ್ದರು ಎಂದರೆ ಸರಿ. ಸಣ್ಣೇಗೌಡರು ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಶಬ್ದ ಕೇಳಿದಾಗ ಅಪಘಾತದ ಬಗ್ಗೆ ತಿಳಿಯಿತು. ನನಗೂ ಬೈಕ್ ಗೂ 100 ಅಡಿ ಇತ್ತು. ಟ್ರಾಕ್ಟರ್ ನನಗೆ ಕಂಡಿಲ್ಲ. ಟ್ರಾಕ್ಟರ್ ಕಂಡಿದ್ದರೂ ಸಹ ಬೈಕ್ ಸವಾರ ಅತಿವೇಗವಾಗಿ ಚಾಲನೆ

ಮಾಡದ ಕಾರಣ ಅಪಘಾತ ಆಗಿತ್ತು ವಿಮಾ ಕಂಪನಿಯವರು ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್ ಅನ್ನು ರಸ್ತೆಯ ಎಡಬದಿಯಲ್ಲಿ ನಿಲ್ಲಿಸಿದ್ದರು ಎಂದರೆ ಸರಿಯಲ್ಲ. ಬೈಕ್ ಸವಾರರಿಗೆ ವಯಸ್ಸಾದ ಕಾರಣ ಕಣ್ಣು ಕಾಣದೆ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.